**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ರವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:-**

**ಸೂಚನೆ:**

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿನ ಯಾವುದೇ ಖಾತೆ ಇಲ್ಲದಿರುವ ನಿವೇಶನಗಳು ಮನೆಗಳು ವಸತಿ ಸಮುಚ್ಚಯಗಳಿಗೆ ಎ ಅಥವಾ ಬಿ ಖಾತಾ ನೀಡುತ್ತಿಲ್ಲದಿರುವುದು, ಮತ್ತು ಬಿ. ಖಾತಾ ಇರುವ ನಿವೇಶನಗಳು, ಮನೆಗಳು, ವಸತಿ ಸಮುಚ್ಚಯಗಳಿಗೆ ಎ ಖಾತಾ ಮತ್ತು ವಿಭಜನೆ ಖಾತಾ ನೀಡದಿರುವುದರಿಂದ ಮನೆಗಳಿಗೆ ವಸತಿ ಸಮುಚ್ಚಯಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ ಮತ್ತು ಕುಡಿಯುವ ನೀರಿನ ಹಾಗೂ ಒಳಚರಂಡಿ ಸಂಪರ್ಕಗಳನ್ನು ನೀಡುತ್ತಿಲ್ಲದ ಕಾರಣ ಬೆಂಗಳೂರು ಲಕ್ಷಾಂತರ ಜನರಿಗೆ ನಿವೇಶನ ಮನೆ ಹಾಗೂ ವಸತಿ ಸಮುಚ್ಚಯಗಳಲ್ಲಿ ಫ್ಲಾಟ್‌ಗಳನ್ನು ಖರೀದಿಸುವವರಿಗೆ ಹಾಗೂ ಮಾರಾಟ ಮಾಡುವವರಿಗೆ ತುಂಬಾ ತೊಂದರೆಯಾಗಿದೆ. ಸರ್ಕಾರವು ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ಇಂತಹವುಗಳಿಗೆ ಎಲ್ಲ ಸೌಲಭ್ಯಗಳನ್ನು ನೀಡುವುದಾಗಿ ಘೋಷಿಸಿದ್ದರೂ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನಿವೇಶನ, ಮನೆ ಹಾಗೂ ವಸತಿ ಸಮುಚ್ಚಯಗಳನ್ನು ಎ ಅಥವಾ ಬಿ ಖಾತಾ ನೀಡದೆ ಇರುವುದರಿಂದ ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ.

**ಉತ್ತರ:**

ಗ್ರೇಟರ್ ಬೆಂಗಳೂರು ಪ್ರದೇಶ ಮತ್ತು ಬೆಂಗಳೂರು ನಗರದ 5 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಕೆಳಕಂಡ ಮೂರು ವಿಧದ ಇ-ಖಾತಾಗಳನ್ನು ನೀಡಲಾಗುತ್ತಿದೆ:

1. ಈಗಾಗಲೇ ಹಸ್ತಚಾಲಿತ (Manual) ಖಾತಾ ಹೊಂದಿರುವ ಸ್ವತ್ತುಗಳಿಗೆ ಇ-ಖಾತಾ ನೀಡುವುದು.
2. ಪ್ರಸ್ತುತ ಖಾತಾ ಹೊಂದಿಲ್ಲದ ಪ್ರತ್ಯೇಕ ಸ್ವತ್ತಿನ ಮಾಲೀಕರಿಗೆ ಹೊಸ ಇ-ಖಾತಾ ನೀಡುವುದು.
3. ಇದುವರೆವಿಗೂ ಖಾತಾ ದಾಖಲಾಗದೇ ಇರುವ ಬಡಾವಣೆಗಳು, ಬಹುಮಹಡಿ ಅಪಾರ್ಟ್‌ಮೆಂಟ್‌ಗಳು / ಘಟಕಗಳಿಗೆ (ಅಭಿವೃದ್ಧಿದಾರರು ಮತ್ತು ನಾಗರಿಕರಿಗೆ) Bulk New ಇ-ಖಾತಾ ನೀಡುವುದು.

ಮೇಲಿನ ಮೂರು ವಿಧಗಳ ಇ-ಖಾತಾಗಳನ್ನು ಸಾಮಾನ್ಯವಾಗಿ ಎ-ಖಾತಾ ಮತ್ತು ಬಿ-ಖಾತಾ ಸ್ವತ್ತುಗಳಿಗೆ ನೀಡಲಾಗುತ್ತಿದೆ. ಎ-ಖಾತಾವನ್ನು ಈಗಾಗಲೇ ಹಸ್ತಚಾಲಿತ ಎ-ಖಾತಾ ಹೊಂದಿರುವ ಸ್ವತ್ತುಗಳಿಗೆ ನೀಡುವುದರ ಜೊತೆಗೆ, ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ, 1961 ಹಾಗೂ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024ರ ಅನ್ವಯ ಅಗತ್ಯವಿರುವ ಎಲ್ಲಾ ಅನುಮೋದನೆಗಳನ್ನು ಹೊಂದಿರುವ ಸ್ವತ್ತುಗಳಿಗೂ ನೀಡಲಾಗುತ್ತಿದೆ.

ಪ್ರಸ್ತುತ ಹಸ್ತಚಾಲಿತ ಬಿ-ಖಾತಾ ಹೊಂದಿರುವ ಸ್ವತ್ತುಗಳಿಗೆ ಬಿ-ಪ್ರಕಾರದ ಇ-ಖಾತಾ ನೀಡಲಾಗುತ್ತಿದ್ದು, ಹಾಗೂ ಎ-ಖಾತಾ ಪಡೆಯಲು ಅರ್ಹತೆ ಇಲ್ಲದಿರುವ ಅಥವಾ ಅರ್ಜಿ ಸಲ್ಲಿಸಿ 5 ದಿನಗಳ ಅವಧಿ ಮೀರಿ ಸ್ವಯಂಚಾಲಿತವಾಗಿ ಇ-ಖಾತಾ ಪಡೆಯಲು ಅರ್ಹವಾಗುವ ಅನ್ವಯ ಬಿ-ಖಾತಾ ಪಡೆಯಲು ಅರ್ಹವಾಗಿರುವ ಹೊಸ ಸ್ವತ್ತುಗಳಿಗೆ ಬಿ-ಪ್ರಕಾರದ ಇ-ಖಾತಾ ನೀಡಲಾಗುತ್ತದೆ. ಇ-ಖಾತಾ ನೀಡುವ ಪ್ರಕ್ರಿಯೆ ಈಗ ಸಂಪೂರ್ಣವಾಗಿ ಸುಗಮಗೊಳಿಸಲಾಗಿದ್ದು, ನಿರ್ದಿಷ್ಟ ಹಾಗೂ ನಿರೀಕ್ಷಿತ ಕ್ರಮದಲ್ಲಿ ಜಾರಿಗೊಳಿಸಲಾಗುತ್ತಿದೆ.

ನಾಗರಿಕರಿಂದ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ, ವಿಲೇವಾರಿಯಾದ ಅರ್ಜಿಗಳ ಸಂಖ್ಯೆ, ವಿಲೇವಾರಿ ಪ್ರಮಾಣ (ಶೇಕಡಾವಾರು) ಹಾಗೂ ಒಂದು ನಾಗರಿಕ ಅರ್ಜಿಯನ್ನು ವಿಲೇವಾರಿ ಮಾಡಲು ಸರಾಸರಿ ತೆಗೆದುಕೊಳ್ಳುವ ಸಮಯ ಇತ್ಯಾದಿ ಬಗ್ಗೆ ಪ್ರಸ್ತುತ ಹಂತದ ವಿವರಗಳು ಕೆಳಕಂಡಂತಿವೆ.

| | |
|---|---|
| ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ | 967517 |
| ವಿಲೇವಾರಿ ಮಾಡಲಾಗಿರುವ ಅರ್ಜಿಗಳ ಸಂಖ್ಯೆ | 958813 |
| ಶೇಕಡಾವಾರು ವಿಲೇವಾರಿ | 99.10% |
| ವಿಲೇವಾರಿಗಾಗಿ ತೆಗೆದುಕೊಂಡ ಸರಾಸರಿ ದಿನಗಳು | 5 ದಿನಗಳು |

ಹೊಸ ಇ-ಖಾತಾ (ಪ್ರತ್ಯೇಕ ಮತ್ತು ಬಲ್ಕ್ ಎರಡೂ) ನೀಡುವ ಸಂದರ್ಭದಲ್ಲಿ ದಾಖಲೆಗಳ ಪರಿಶೀಲನೆಯ ಜೊತೆಗೆ ಕಂದಾಯ ಪರಿವೀಕ್ಷಕರು / ಕಂದಾಯ ವಸೂಲಿಗಾರರ ಮೂಲಕ ಸ್ಥಳ ಪರಿಶೀಲನೆ ಹಾಗೂ ಮಾಲೀಕರ ಗುರುತಿನ ದೃಢೀಕರಣ ನಡೆಸಬೇಕಾಗುತ್ತದೆ. ಆದ್ದರಿಂದ ಅರ್ಜಿ ಸಲ್ಲಿಸಿದ ದಿನಾಂಕದಿಂದ ಸುಮಾರು 50 ದಿನಗಳೊಳಗೆ ಹೊಸ ಖಾತಾ ಅರ್ಜಿಯನ್ನು ವಿಲೇವಾರಿ ಮಾಡಲು ಅವಶ್ಯಕ ಸಮಯ ಬೇಕಾಗುತ್ತದೆ.

**ಸಂಖ್ಯೆ: ನಅಇ 115 ಬಿಬಿಎಸ್ 2026**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ